# <u>ಕರ್ನಾಟಕ ಸರ್ಕಾರದ ನಡವಳಿಗಳು</u>

**ವಿಷಯ:** ರಾಜ್ಯದಲ್ಲಿ ಪ್ರತ್ಯೇಕವಾಗಿ ಮಾದಕ ವಸ್ತುಗಳ ವಿರೋಧಿ ಕಾರ್ಯಪಡೆ (Anti Narcotic Task Force) ಘಟಕವನ್ನು ಸೃಜಿಸುವ ಕುರಿತು.

**ಓದಲಾಗಿದೆ:**

(1) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಇವರ ಪತ್ರ ಸಂಖ್ಯೆ: ಪಿ&ಸಿ(2)07/2023-24, ದಿನಾಂಕ: 10/06/2025 ಮತ್ತು 12/06/2025.

(2) ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 177 ಪಿಓಪಿ 2024, ದಿನಾಂಕ: 01/08/2025.

(3) ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 177 ಪಿಓಪಿ 2024, ದಿನಾಂಕ: 01/08/2025.

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಪತ್ರಗಳಲ್ಲಿ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ರಾಜ್ಯದಲ್ಲಿ "ಮಾದಕ ವಸ್ತುಗಳ ವಿರೋಧಿ ಕಾರ್ಯಪಡೆ" (Anti Narcotic Task Force) ಘಟಕವನ್ನು 388 ವಿವಿಧ ದರ್ಜೆಯ ಹುದ್ದೆಗಳೊಂದಿಗೆ ಸೃಜಿಸಲು ಆವರ್ತಕ ವೆಚ್ಚ ರೂ.28,96,91,534/- ತಗಲುವುದಾಗಿ ತಿಳಿಸಲಾಗಿದ್ದು ಪ್ರಸ್ತಾವನೆಯನ್ನು ಪರಿಷ್ಕರಿಸಿ, ಪ್ರಸ್ತಾಪಿತ "ಮಾದಕ ವಸ್ತುಗಳ ವಿರೋಧಿ ಕಾರ್ಯಪಡೆ" (Anti Narcotic Task Force) ಘಟಕವನ್ನು ಡಿಜಿಪಿ/ಎಡಿಜಿಪಿ (ಸಿ&ಎನ್) ರವರ ಅಧೀನದಲ್ಲಿ ಕೇಂದ್ರಸ್ಥಾನದಲ್ಲಿ ಕೆಳಕಂಡ ವಿವಿಧ ದರ್ಜೆಯ 74 ಕಾರ್ಯಕಾರಿ/ಲಿಪಿಕ ಮತ್ತು 10 ತಾಂತ್ರಿಕ ಹುದ್ದೆಗಳೊಂದಿಗೆ ಸೃಜಿಸುವುದು ಅವಶ್ಯವಿದ್ದು, ಸದರಿ "ಮಾದಕ ವಸ್ತುಗಳ ವಿರೋಧಿ ಕಾರ್ಯಪಡೆ" (Anti Narcotic Task Force) ಘಟಕವು ಒಟ್ಟಾರೆಯಾಗಿ ಡಿಜಿ ಮತ್ತು ಐಜಿಪಿರವರ ಅಧೀನದಲ್ಲಿ ಕಾರ್ಯನಿರ್ವಹಿಸುವುದೆಂದು ತಿಳಿಸಿರುತ್ತಾರೆ.

| ಕ್ರಮ ಸಂಖ್ಯೆ | ಹುದ್ದೆ | ಕೇಂದ್ರ ಕಛೇರಿ |
|---|---|---|
| 1. | ಹೆಚ್ಚುವರಿ ಪೊಲೀಸ್ ಅಧೀಕ್ಷಕರು | 02 |
| 2. | ಪೊಲೀಸ್ ಉಪಾಧ್ಯಕ್ಷರು/ಸಹಾಯಕ ಪೊಲೀಸ್ ಆಯುಕ್ತರು | 02 |
| 3. | ಪಿ.ಐ (ಸಿವಿಲ್) | 02 |
| 4. | ಪಿ.ಎಸ್.ಐ (ಸಿವಿಲ್) | 04 |
| 5. | ಸಿ.ಹೆಚ್.ಸಿ | 20 |
| 6. | ಸಿ.ಪಿ.ಸಿ | 30 |
| 7. | ಸಹಾಯಕ ಆಡಳಿತಾಧಿಕಾರಿ | 01 |
| 8. | ಶಾಖಾಧೀಕ್ಷಕರು | 02 |
| 9. | ಕಿರಿಯ ಸಹಾಯಕರು | 02 |
| 10. | ಪ್ರಥಮ ದರ್ಜೆ ಸಹಾಯಕರು | 02 |
| 11. | ಶೀಘ್ರಲಿಪಿಗಾರರು | 03 |
| 12. | ದಲಾಯತ್ | 04 |
| | **ಒಟ್ಟು** | **74** |

ಮೇಲೆ ವಿವರಿಸಲಾದ ಹುದ್ದೆಗಳಲ್ಲಿ 02-ಪಿ.ಐ, 04-ಪಿ.ಎಸ್.ಐ, 20-ಸಿ.ಹೆಚ್.ಸಿ, 30-ಸಿ.ಪಿ.ಸಿ ಅಂದರೆ ಒಟ್ಟು 56 ಹುದ್ದೆಗಳ ಮಂಜೂರಾತಿ ಬಲವನ್ನು ನಕ್ಸಲ್ ನಿಗ್ರಹ ಪಡೆ (ಎ.ಎನ್.ಎಫ್) ಘಟಕದಿಂದ ಪ್ರಸ್ತಾಪಿತ "ಮಾದಕ ವಸ್ತುಗಳ ವಿರೋಧಿ ಕಾರ್ಯಪಡೆ" (Anti Narcotic Task Force) ಘಟಕಕ್ಕೆ ಸ್ಥಳಾಂತರಿಸುವಂತೆ ಕೋರಿರುತ್ತಾರೆ.

...2)

prabhavaa.com

ಹೊರಗುತ್ತಿಗೆ ಆಧಾರದಲ್ಲಿ ಕೆಳಕಂಡ ಹುದ್ದೆಗಳ (ತಜ್ಞರು) ಅವಶ್ಯಕತೆ ಇರುತ್ತದೆಂದು ಸಹ ತಿಳಿಸಿರುತ್ತಾರೆ.

| ಕ್ರಮ ಸಂಖ್ಯೆ | ಹುದ್ದೆ | ಕೇಂದ್ರ ಕಛೇರಿ |
|---|---|---|
| 1. | ಫೋರೆನ್ಸಿಕ್/ಕಾನೂನು ತಜ್ಞರು | 05 |
| 2. | ಫೋರೆನ್ಸಿಕ್ ಲೆಕ್ಕಪರಿಶೋಧಕರು (Accountants) | 02 |
| 3. | ಕಂಪ್ಯೂಟರ್/ಡೇಟಾ ವಿಶ್ಲೇಷಕರು | 03 |
| | **ಒಟ್ಟು** | **10** |

ಜಿಲ್ಲಾ/ನಗರ ಪೊಲೀಸ್ ಘಟಕಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಿ.ಇ.ಎನ್ ಪೊಲೀಸ್ ಠಾಣೆಗಳು ಆಯಾ ಘಟಕಗಳ ವ್ಯಾಪ್ತಿಯಲ್ಲಿ ಮಾದಕ ದ್ರವ್ಯ ನಿಗ್ರಹ ಜಾರಿ ವಿಭಾಗಗಳಾಗಿ ಕಾರ್ಯನಿರ್ವಹಿಸಲು ಹಾಗೂ ಆಯಾ ಜಿಲ್ಲಾ/ನಗರ ಪೊಲೀಸ್ ಘಟಕಗಳ ಸಹಾಯಕ ಅಭಿಯೋಗ ನಿರ್ದೇಶಕರು (Assistant Director of Prosecution) ಘಟಕಕ್ಕೆ ಸಂಬಂಧಿಸಿದ ಕಾನೂನಾತ್ಮಕ ವಿಷಯಗಳಲ್ಲಿ ಸಹಾಯಕರಾಗಿ ಕಾರ್ಯನಿರ್ವಹಿಸಲು ಪ್ರಸ್ತಾಪಿಸಿರುತ್ತಾರೆ.

ನಕ್ಸಲ್ ನಿಗ್ರಹ ಪಡೆ (ಎ.ಎನ್.ಎಫ್) ಘಟಕದಿಂದ ವರ್ಗಾಯಿಸಲು ಪ್ರಸ್ತಾಪಿಸಿರುವ 56 ಹುದ್ದೆಗಳನ್ನು ಹೊರತುಪಡಿಸಿ, ವಿವಿಧ ದರ್ಜೆಯ 28 ಹುದ್ದೆಗಳ ಸೃಜನೆಗೆ ವಾರ್ಷಿಕವಾಗಿ ಅಂದಾಜು ರೂ.2,77,86,556/-ಗಳ ಆವರ್ತಕ ವೆಚ್ಚವಾಗುವುದಾಗಿ ತಿಳಿಸಿ, "ಮಾದಕ ವಸ್ತುಗಳ ವಿರೋಧಿ ಕಾರ್ಯಪಡೆ" (Anti Narcotic Task Force) ಘಟಕವನ್ನು ಅವಶ್ಯಕ ಹುದ್ದೆಗಳೊಂದಿಗೆ ಸೃಜಿಸಿ, ಸರ್ಕಾರದ ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ (2)ರ ಆದೇಶದಲ್ಲಿ, ಕರ್ನಾಟಕ ರಾಜ್ಯದಲ್ಲಿ ಹೊಸದಾಗಿ ಸೈಬರ್ ಅಪರಾಧ ತಡೆ ಘಟಕವನ್ನು (Cyber Crimes Prevention Unit) ಸ್ಥಾಪಿಸಿ, 43 ಸಿ.ಇ.ಎನ್ ಪೊಲೀಸ್ ಠಾಣೆಗಳನ್ನು ಸೈಬರ್ ಅಪರಾಧ ಪೊಲೀಸ್ ಠಾಣೆಗಳೆಂದು (Cyber Crime Police Station) ಎಂದು ಮರುಪದನಾಮೀಕರಿಸಿ ಆದೇಶಿಸಲಾಗಿದೆ. ಉಳಿದಂತೆ ನಾರ್ಕೋಟಿಕ್ಸ್ ಮತ್ತು ಆರ್ಥಿಕ ಅಪರಾಧಗಳನ್ನು ಸಿ.ಇ.ಎನ್ ಪೊಲೀಸ್ ಠಾಣೆಗಳಿಂದ ಬೇರ್ಪಡಿಸಿ, ಸಿ.ಇ.ಎನ್ ಪೊಲೀಸ್ ಠಾಣೆಗಳಲ್ಲಿ 10 ನಿಯಮ/ಅಧಿನಿಯಮಗಳಡಿಯಲ್ಲಿ ಪ್ರಕರಣ ದಾಖಲಿಸುವ ಅಧಿಕಾರವನ್ನು ಹಿಂಪಡೆದು, ಸದರಿ ನಿಯಮ/ಅಧಿನಿಯಮಗಳಡಿಯಲ್ಲಿನ ಪ್ರಕರಣಗಳನ್ನು ವ್ಯಾಪ್ತಿಗನುಗುಣವಾಗಿ ಸಂಬಂಧಿತ ಕಾನೂನು ಮತ್ತು ಸುವ್ಯವಸ್ಥೆ ಪೊಲೀಸ್ ಠಾಣೆಗಳಲ್ಲಿ ನಿರ್ವಹಿಸಲು ಸೂಚಿಸಿದೆ.

ಮೇಲೆ ಓದಲಾದ (3)ರ ಅಧಿಸೂಚನೆಯಲ್ಲಿ, ಸೈಬರ್ ಅಪರಾಧ ಪೊಲೀಸ್ ಠಾಣೆಗಳಲ್ಲಿ ಕೇವಲ Information Technology Act-2000 IPC/BNS ಅಡಿಯಲ್ಲಿ ದಾಖಲಾಗುವ ಪ್ರಕರಣಗಳನ್ನು ಮಾತ್ರ ದಾಖಲಿಸಲು ಹಾಗೂ ತನಿಖೆ ಕೈಗೊಳ್ಳಲು ಅಧಿಕಾರ ನೀಡಿ, ವ್ಯಾಪ್ತಿ ನಿಗದಿಪಡಿಸಿ ಅಧಿಸೂಚನೆ ಹೊರಡಿಸಲಾಗಿದೆ.

ಮುಂದುವರೆದು, ನಕ್ಸಲ್ ನಿಗ್ರಹ ಪಡೆ (Anti Naxal Force) ಘಟಕದಲ್ಲಿ ಪ್ರಸ್ತುತ ಉಳಿಕೆಯಾಗಿರುವ ವಿವಿಧ ದರ್ಜೆಯ 376 ಹುದ್ದೆಗಳಲ್ಲಿ, ಮಾದಕ ವಸ್ತುಗಳ ವಿರೋಧಿ

prabhavaa.com

ಕಾರ್ಯಪಡೆ (Anti Narcotic Task Force) ಘಟಕಕ್ಕೆ ಅವಶ್ಯವಿರುವ 02-ಪಿ.ಐ (ಸಿವಿಲ್), 04-ಪಿ.ಎಸ್.ಐ (ಸಿವಿಲ್), 20-ಸಿ.ಹೆಚ್.ಸಿ, 30-ಸಿ.ಪಿ.ಸಿ ಅಂದರೆ ಒಟ್ಟು 56 ಹುದ್ದೆಗಳನ್ನು ವರ್ಗಾಯಿಸಿದ ನಂತರ ನಕ್ಸಲ್ ನಿಗ್ರಹ ಪಡೆ (Anti Naxal Force) ಘಟಕದಲ್ಲಿ ವಿವಿಧ ದರ್ಜೆಯ ಒಟ್ಟು 320 ಹುದ್ದೆಗಳು ಉಳಿಕೆಯಾಗಲಿದೆ.

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 141 ಪಿಓಪಿ 2024,</u>**
**<u>ಬೆಂಗಳೂರು, ದಿನಾಂಕ: 01/ಆಗಸ್ಟ್/2025.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕಾನೂನು ಮತ್ತು ಸುವ್ಯವಸ್ಥೆ ಪೊಲೀಸ್ ಠಾಣೆಗಳಲ್ಲಿ ನಾರ್ಕೋಟಿಕ್ಸ್ ಸಂಬಂಧ ದಾಖಲಾಗುವ ಪ್ರಕರಣಗಳ ಮೇಲ್ವಿಚಾರಣೆಗಾಗಿ ಮಾದಕ ವಸ್ತುಗಳ ವಿರೋಧಿ ಕಾರ್ಯಪಡೆ (Anti Narcotic Task Force) ಘಟಕವನ್ನು ಕೆಳಕಂಡ 10 ಹುದ್ದೆಗಳೊಂದಿಗೆ ಸೃಜಿಸಲು ಮತ್ತು ಸದರಿ ಘಟಕಕ್ಕೆ ಅವಶ್ಯವಿರುವ ಕೆಳಕಂಡ 02-ಪಿ.ಐ (ಸಿವಿಲ್), 04-ಪಿ.ಎಸ್.ಐ (ಸಿವಿಲ್), 20-ಸಿ.ಹೆಚ್.ಸಿ, 30-ಸಿ.ಪಿ.ಸಿ ಅಂದರೆ ಒಟ್ಟು 56 ಹುದ್ದೆಗಳನ್ನು ನಕ್ಸಲ್ ನಿಗ್ರಹ ಪಡೆ (Anti Naxal Force) ಘಟಕದಿಂದ ವರ್ಗಾಯಿಸಲು ಹಾಗೂ ಮಾದಕ ವಸ್ತುಗಳ ವಿರೋಧಿ ಕಾರ್ಯಪಡೆ (Anti Narcotic Task Force) ಘಟಕವು ಒಟ್ಟಾರೆಯಾಗಿ ಡಿಜಿ ಮತ್ತು ಐಜಿಪಿರವರ ಅಧೀನದಲ್ಲಿ ಕಾರ್ಯನಿರ್ವಹಿಸುವಂತೆ ಮತ್ತು ಡಿ.ಜಿ., ಸೈಬರ್ ಕಮಾಂಡ್‌ರವರಿಗೆ ಕಾರ್ಯವರದಿ ಮಾಡಿಕೊಳ್ಳುವಂತೆ ಸೂಚಿಸಿದೆ.

**<u>ಹೊಸದಾಗಿ ಸೃಜಿಸಲಾಗುವ ಹುದ್ದೆಗಳು</u>**

| ಕ್ರಮ ಸಂಖ್ಯೆ | ಹುದ್ದೆಗಳ ವಿವರ | ಹುದ್ದೆಗಳ ಸಂಖ್ಯೆ |
|---|---|---|
| 1. | ಹೆಚ್ಚುವರಿ ಪೊಲೀಸ್ ಅಧೀಕ್ಷಕರು | 02 |
| 2. | ಪೊಲೀಸ್ ಉಪಾಧ್ಯಕ್ಷರು/ಸಹಾಯಕ ಪೊಲೀಸ್ ಆಯುಕ್ತರು | 02 |
| 3. | ಸಹಾಯಕ ಆಡಳಿತಾಧಿಕಾರಿ | 01 |
| 4. | ಶಾಖಾಧೀಕ್ಷಕರು | 01 |
| 5. | ಕಿರಿಯ ಸಹಾಯಕರು | 01 |
| 6. | ಪ್ರಥಮ ದರ್ಜೆ ಸಹಾಯಕರು | 01 |
| 7. | ಶೀಘ್ರಲಿಪಿಗಾರರು | 01 |
| 8. | ದಲಾಯತ್ | 01 |
| | **ಒಟ್ಟು** | **10** |

**<u>ಮಾದಕ ವಸ್ತುಗಳ ವಿರೋಧಿ ಕಾರ್ಯಪಡೆ ಘಟಕದಿಂದ ಮರುವಿಂಗಡಣೆ ಮಾಡುವ ಹುದ್ದೆಗಳು</u>**

| ಕ್ರಮ ಸಂಖ್ಯೆ | ಹುದ್ದೆಗಳ ವಿವರ | ಹುದ್ದೆಗಳ ಸಂಖ್ಯೆ |
|---|---|---|
| 1. | ಪಿ.ಐ (ಸಿವಿಲ್) | 02 |
| 2. | ಪಿ.ಎಸ್.ಐ (ಸಿವಿಲ್) | 04 |

prabhavaa.com

...4)

| | | |
|---|---|---|
| 3. | ಸಿ.ಹೆಚ್.ಸಿ | 20 |
| 4. | ಸಿ.ಪಿ.ಸಿ | 30 |
| | **ಒಟ್ಟು** | **56** |

ಸದರಿ ಸೃಜಿಸಲಾಗುವ ಘಟಕವು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ANTFರವರಿಗೆ ಕಾರ್ಯವರದಿ ಮಾಡಿಕೊಳ್ಳತಕ್ಕದ್ದು. ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ANTFರವರು ಡಿ.ಜಿ. ಮತ್ತು ಐ.ಜಿ.ಪಿ.ಯವರಿಗೆ ಕಾರ್ಯವರದಿ ಮಾಡಿಕೊಳ್ಳತಕ್ಕದ್ದು.

ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರ ಒಂದು ಹುದ್ದೆಯನ್ನು ವರ್ಗಾಯಿಸುವುದರೊಂದಿಗೆ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ANTF ಎಂದು ಪುನರ್‌ನಾಮೀಕರಣ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಪ್ರತ್ಯೇಕವಾಗಿ ಆದೇಶ ಹೊರಡಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 82 ವೆಚ್ಚ-11/2025, ದಿನಾಂಕ: 03/07/2025ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
Vanaja K.N. 1/8/25
(ಕೆ.ಎನ್.ವನಜ)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ).

1/8/2025

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು (ಆಡಿಟ್-II), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2) ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001.
3) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ನಂ.2, ನೃಪತುಂಗ ರಸ್ತೆ, ಬೆಂಗಳೂರು-560001.
4) ಪೊಲೀಸ್ ಮಹಾನಿರ್ದೇಶಕರು, (C&N), ಕಾರ್ಲಟನ್ ಭವನ, ಅರಮನೆ ರಸ್ತೆ, ಬೆಂಗಳೂರು.
5) ಪೊಲೀಸ್ ಮಹಾನಿರ್ದೇಶಕರು, ಸಿ.ಐ.ಡಿ., ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಕಾರ್ಲಟನ್ ಭವನ, ಅರಮನೆ ರಸ್ತೆ, ಬೆಂಗಳೂರು.
6) ಪೊಲೀಸ್ ಮಹಾನಿರ್ದೇಶಕರು, ಸೈಬರ್ ಕಮಾಂಡ್, ಬೆಂಗಳೂರು.
7) ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ವಿಧಾನಸೌಧ, ಬೆಂಗಳೂರು.
8) ಮಾನ್ಯ ಗೃಹ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
9) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
10) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನಸೌಧ, ಬೆಂಗಳೂರು.

prabhavaa.com

...5)

11) ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು.
12) ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
13) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-11 ಮತ್ತು ಜಿ.ಪಂ), ವಿಧಾನ ಸೌಧ, ಬೆಂಗಳೂರು.
14) ಸರ್ಕಾರದ ವಿಶೇಷ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು), ವಿಧಾನಸೌಧ, ಬೆಂಗಳೂರು.
15) ಶಾಖಾ ರಕ್ಷಾ, ಕಡತ/ಹೆಚ್ಚುವರಿ ಪ್ರತಿಗಳು.

prabhavaa.com